# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. :21/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸೈಯದ ಸಾಜಿದ್ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಸೈಯದ್ ವಾಜಿದ್ | **05.09.2023** |
| ವಯಸ್ಸು | : | 38 ವರ್ಷ | |
| ವೃತ್ತಿ | : | ಗುಜರಿ ಕೆಲಸ | ಪಿ.ಡಬ್ಲೂಃ 12 |
| ವಾಸಸ್ಥಳ | : | ಮೈಸೂರು. | ಸಿ.ಡಬ್ಲೂಃ 19 |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನನಗೆ 5 ವರ್ಷಗಳಿಂದ ಪರಿಚಯ ಇದ್ದಾರೆ . ಚಾಸಾ 1 ಮತ್ತು 2 ನನಗೆ ಪರಿಚಯ ಇಲ್ಲ. ಚಾಸಾ 20 ರಿಜ್ವಾನಾ ಎನ್ನುವವರು ನನಗೆ ಗೊತ್ತಿಲ್ಲ. ನಾನು ಆರೋಪಿಯ ಮನೆಯನ್ನು ಭೋಗ್ಯಕ್ಕೆ ಪಡೆದುಕೊಳ್ಳಲು ಅವರ ಜೊತೆ ಮಾತನಾಡಿ ಒಂದು ಚೆಕ್ ಮತ್ತು ಬಾಂಡ್ ಪೇಪರ್ ಕೊಟ್ಟಿದ್ದೆನು. ಸದರಿ ಚೆಕ್ ಸಹಿ ಮಾಡಿ, ಕಾಲಿ ಚೆಕ್ ಕೊಟ್ಟಿದ್ದೆನು. ಆ ನಂತರ ಹೆಂಡತಿ ಮತ್ತು ತಾಯಿಯು ಸದರಿ ಮನೆ ಬಾಡಿಗೆಗೆ ಬೇಡ ಎಂದು ಹೇಳಿದರು. ಆ ನಂತರ ನಾನು ಆರೋಪಿಯ ಬಳಿ ಹೋಗಿ ನಾನು ಕೊಟ್ಟ ಚೆಕ್ ಮತ್ತು ಬಾಂಡ್ ಪೇಪರ್ ನ್ನು ಮರಳಿ ಕೊಡಲು ಕೇಳಿದೆನು. ಆಗ ಆರೋಪಿಯು ಅವುಗಳನ್ನು ಕೊಡುತ್ತೇನೆ, ಎಲ್ಲಿಯೋ ಇಟ್ಟಿದ್ದೇನೆ ಎಂದು ಹೇಳಿದರು. ನಾನು ಆರೋಪಿಯ ಬಳಿ ಯಾವುದೇ ಸಾಲವನ್ನು ಪಡೆದಿಲ್ಲ. ಸದರಿ 4 ಚೆಕ್ ಗಳು ಪೈಲಟ್ ಸರ್ಕಲ್, ಸಿಂಡಿಕೆಟ್ ಬ್ಯಾಂಕ್ ಬ್ರ್ಯಾಂಚ್ ನ ಚೆಕ್ ಗಳು ಆಗಿರುತ್ತವೆ. ನಾನು ಆರೋಪಿಯ ಬಳಿ ಬಡ್ಡಿ ಸಾಲವನ್ನು ಪಡೆದಿಲ್ಲ ಮತ್ತು ಅಂತಹ ಸಾಲವನ್ನು ಅವರಿಗೆ ಹಿಂತಿರುಗಿಸಿಲ್ಲ. ಬಾಂಡ್ ಪೇಪರನ್ನು ಭೋಗ್ಯಕ್ಕಾಗಿ ಕೊಟ್ಟಿದ್ದೆನು, ಆದರೆ ಸಾಲಕ್ಕಾಗಿ ಅಲ್ಲ.

ಮೃತ ಪವಿತ್ರ ಕುಮಾರಿ ನನಗೆ ಗೊತ್ತಿಲ್ಲ ಅವರಿಂದ ನಾನು ಯಾವುದೇ ಸಾಲ ಪಡೆದಿಲ್ಲ. ಸದರಿ ಪವಿತ್ರ ಕುಮಾರಿ ಜೀವಂತ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ನಾನು ಸದರಿ ಬ್ಯಾಂಕ್ ನಲ್ಲಿ ಅಕೌಂಟ್ ತೆರೆಯಲು ಅರ್ಜಿ ನಮೂನೆಗಳನ್ನು ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೋರಿಸಿದ ಅಟೆಸ್ಟೆಡ್ ಅರ್ಜಿ ಪಾರಂ ಅನ್ನು ಸಾಕ್ಷಿ ನೋಡಿ ಗುರುತಿಸಿದರು. ಅದನ್ನು ನಿಪಿ.–12 ಎಂದು, ಸಾಕ್ಷಿಯ ಸಹಿಯನ್ನು ನಿಪಿ.– 12 (ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಚೆಕ್ ಗಳನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

05.09.2023
(ಜಿ.ಎಸ್. ಸಂಗ್ರೇಶಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.